**ಓ ಎಸ್ 9/2021 ಡಿಡಬ್ಲ್ಯೂ1**

**ಸಾಕ್ಷಿಯನ್ನು ದಿಃ 06.01.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎನ್ ಎಂ ಜಿ ವಕೀಲರಿಂದಃ**

ದಾವಾ ಅನುಸೂಚಿ ಸರ್ವೆ ನಂ. 72 ರಲ್ಲಿ 0.24 ಗುಂಟೆ ಜಮೀನು ಸಣ್ಣಮ್ಮರವರ ಹೆಸರಿನಲ್ಲಿದ್ದಂತಹ ಜಮೀನು ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದೆ ಎಂದು ಹೇಳಿ ಅಮಲ್ಜಾರಿ ಅರ್ಜಿ ಸಂಖ್ಯೆ 27/2021 ರಲ್ಲಿ ವಾದಿ ಮತ್ತು 6 ನೇ ಪ್ರತಿವಾದಿ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಅದೇ ರೀತಿಯಲ್ಲಿ ಸಂಗತಿಯನ್ನು ಈ ಪ್ರಕರಣದಲ್ಲಿಯೂ ಸಹ 6 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದಾರೆ ಎಂದರೆ ಸರಿ. ಜಮೀನು ಯಾರ ಸರ್ವೆ ನಂಬರಿನಲ್ಲಿ ಅಂದರೆ ನಮ್ಮ ತಂದೆಯ ಮಂಜೂರಾತಿ ಜಮೀನಿನಲ್ಲಿ ಹೋಗಿದೆಯೋ ಅಥವಾ ನಮ್ಮ ಅಜ್ಜಿ ಸಣ್ಣಮ್ಮರವರ ಜಮೀನಿನ ಸರ್ವೆ ನಂಬರಿನಲ್ಲಿ ಹೋಗಿದೆಯೋ ಎಂದು ತಿಳಿದುಕೊಳ್ಳಲು ಹಲವಾರು ಬಾರಿ ವಾದಿ ಮತ್ತು 6 ನೇ ಪ್ರತಿವಾದಿ ಅರ್ಜಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮುನ್ಸಿಪಾಲಿಟಿಯವರು ಮತ್ತು ಅಸಿಸ್ಟೆಂಟ್ ಕಮೀಷನ್ನರ್ ರವರು ಸ್ಥಳ ತನಿಖೆ ಮಾಡಿ ಸಣ್ಣಮ್ಮರವರ ಜಮೀನು ಭೂಸ್ವಾಧೀನಗೊಂಡಿದೆಯೋ ಹೊರತು ನಮ್ಮ ತಂದೆಯ ಜಮೀನು ಭೂಸ್ವಾಧೀನಗೊಂಡಿಲ್ಲ ಎಂದು ವರದಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದರ ಜೊತೆಯಲ್ಲಿ ವೆಂಕಟೇಶರವರು ಗೌರವಾನ್ವಿತ ಲೋಕಾಯುಕ್ತರಿಗೆ ಮನವಿ ಸಲ್ಲಿಸಿದ್ದರ ಮೇರೆಗೆ ಉಪ ವಿಭಾಗಾಧಿಕಾರಿಗಳು ನಮಗೆ ನೋಟೀಸನ್ನು ಸಹ ನೀಡಿದ್ದರು ಎಂದರೆ ಸರಿಯಲ್ಲ. ಸಣ್ಣಮ್ಮರವರ 0.30 ಗುಂಟೆ ಜಮೀನು ಪೈಕಿ 0.24 ಗುಂಟೆ ಜಮೀನು ಸ್ವಾಧೀನಗೊಂಡಿದೆಯೋ ಹೊರತು ನಮ್ಮ ತಂದೆಯ 0.24 ಗುಂಟೆ ಜಮೀನು ಸ್ವಾಧೀನಗೊಂಡಿಲ್ಲ ಎಂದು ಉಪ ವಿಭಾಗಾಧಿಕಾರಿಗಳು ವರದಿ ನೀಡಿದ್ದಾರೆ ಎಂದರೆ ಸರಿಯಲ್ಲ. ಮುನಿಸಿಪಾಲಿಟಿಯಲ್ಲಿ ನಾನು ಹಾಗೂ ನಮ್ಮ ತಂದೆ ಹೊಂದಿದ್ದ ಹುದ್ದೆಯ ಪ್ರಭಾವವನ್ನು ದುರುಪಯೋಗಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು ಈಗಲೂ ಸಹ ನಮ್ಮ ತಂದೆಯ ಜಮೀನು ಭೂಸ್ವಾಧೀನಗೊಂಡಿದೆ

ಎಂದು ಪ್ರತಿಪಾದಿಸುತ್ತಿದ್ದೇವೆಯೋ ಹೊರತು ಸಣ್ಣಮ್ಮನ ಜಮೀನು ಭೂಸ್ವಾಧೀನಗೊಂಡಿದೆ ಎಂದು ಪ್ರತಿಪಾದಿಸುತ್ತಿಲ್ಲ ಎಂದರೆ ಸರಿ. ಈ ಹಿನ್ನಲೆಯಲ್ಲಿ ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿಕೊಂಡು ದಾವಾ ಅನುಸೂಚಿ 1 ನೇ ಐಟಂ ಭೂಸ್ವಾಧೀನಗೊಂಡಿದೆಯೇ ಅಥವಾ ಇಲ್ಲವೇ ಎಂದು ತಿಳಿದುಕೊಳ್ಳಲು ನನ್ನ ತಕರಾರು ಇದೆ. ನಮ್ಮ ತಂದೆಯ ಜಮೀನು ಭೂಸ್ವಾಧೀನಗೊಂಡಿದೆಯೇ ಹೊರತು ಸಣ್ಣಮ್ಮ ಜಮೀನು ಭೂಸ್ವಾಧೀನಗೊಂಡಿಲ್ಲ ಎಂಬುದೇ ನನ್ನ ತಕರಾರು. ದಾವಾ ಆಸ್ತಿ ಐಟಂ ನಂ.1 ರಲ್ಲಿ 0.31 ಗುಂಟೆ ಪೈಕಿ 0.24 ಗುಂಟೆ ಜಮೀನುಭೂಸ್ವಾಧೀನಗೊಂಡಿದೆಯೇ ಹೊರತು ನಮ್ಮ ತಂದೆಯ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡಿಲ್ಲ ಎಂದು 6 ನೇ ಪ್ರತಿವಾದಿಯು ತನ್ನ ಪ್ರತಿವಾದಪತ್ರದಲ್ಲಿ ಸ್ಪಷ್ಟವಾಗಿ ಪ್ರತಿಪಾದನೆ ಮಾಡಿದ್ದಾರೆ ಎಂದರೆ ಸರಿ. ನಾನು ಮುನಿಸಿಪಾಲಿಟಿಗೆ ಮತ್ತು ನನ್ನ ಹಾಗೂ ನನ್ನ ತಂದೆಯ ಒಡಹುಟ್ಟಿದವರಿಗೆ ಮೋಸ ಮಾಡಿರುವ ಕಾರಣ ನ್ಯಾಯಾಲಯದ ನಿಯೋಗಿಯ ನೇಮಕ ಕುರಿತಂತೆ ತಕರಾರು ಎತ್ತುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಶಾನೆ ಡಿ 19 ರಡಿ ನಮ್ಮ ತಂದೆಗೆ ಮಂಜೂರಾಗಿರುವ ಜಮೀನು ಹಳ್ಳ ಖರಾಬು ಆಗಿರುವ ಕಾರಣ ಆ ಮಂಜೂರಾತಿಯನ್ನು ರದ್ದುಪಡಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ರದ್ದು ಆದೇಶದ ವಿರುದ್ಧ ನಾವು ಮೇಲ್ಮನವಿಗೆ ಹೋಗಿದ್ದೇವೆ ಎಂದರೆ ಸರಿಯಲ್ಲ. ಉಪ ವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಮುಂದೆ ನಾನೇ ಪಕ್ಷಕಾರನಾಗಿದ್ದ ಕಾರಣ ಈ ಮೇಲೆ ಹೇಳಿದ ಎಲ್ಲಾ ಪ್ರಕರಣಗಳ ಮಾಹಿತಿ ನನಗೆ ಇದೆ ಎಂದರೆ ಸರಿಯಲ್ಲ. ನಿಶಾನೆ ಡಿ 8 ರಲ್ಲಿ ನಮ್ಮ ತಂದೆ ಹಾಗೂ ನಮ್ಮ ಚಿಕ್ಕಪ್ಪ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ. ಸಾಕ್ಷಿಯು ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ನಿಶಾನೆ ಡಿ 8(ಎ) ಮತ್ತು 8(ಬಿ) ಎಂದು ಗುರುತಿಸಲಾಯಿತು. 1984 ರ ಪಾಲುಪಟ್ಟಿ ನಂತರ ನಿಶಾನೆ ಡಿ 14 ನ್ನು ಮಾಡಿಕೊಳ್ಳಲಾಗಿದೆ ಎಂದರೆ ಸರಿ. ಪಿ ಎಸ್

ನಿಂಗರಾಜು, ಉಮಾಶಂಕರ ಮತ್ತು ಪಿ ಎಸ್ ಜಗದೀಶ್ ರವರ ಜೊತೆ ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಆಸ್ತಿಯ ಅದಲುಬದಲು ಮಾಡಿಕೊಂಡಿದ್ದಾರೆ ಎಂದರೆ ಸರಿ. ಹೀಗೆ ಅದಲು ಬದಲು ಮಾಡಿಕೊಂಡ ನಂತರ ವಾದಿ ವೆಂಕಟೇಶ್ ಮತ್ತು ನಾಗರಾಜೇಗೌಡರು ಸೇರಿಕೊಂಡು ಸರ್ವೆ ನಂ. 63/2 ಬಿ ರಲ್ಲಿ 0.39 ಗುಂಟೆ ಜಮೀನನ್ನು ನಮ್ಮ ತಂದೆ ದೇವೇಗೌಡರಿಗೆ ಹಕ್ಕು ಖುಲಾಸೆ ಪತ್ರದ ಮೂಲಕ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿ. ಅದಲು ಬದಲು ಮಾಡಿಕೊಂಡು ನಿಂಗರಾಜುರವರಿಂದ ಪಡೆದುಕೊಂಡ ಜಮೀನಿನ ಸರ್ವೆ ನಂಬರು ನನಗೆ ನೆನಪಿಲ್ಲ. ನಿಶಾನೆ ಡಿ 22 ರ ಪಾಲುಪಟ್ಟಿಯಲ್ಲಿ ಸದರಿ ಸರ್ವೆ ನಂಬರು 63/2 ಬಿ ನಮೂದು ಇಲ್ಲ. ಸರ್ವೆ ನಂ. 72/1 ರಲ್ಲಿ 0.06 ಗುಂಟೆ ಮತ್ತು 31 ಗುಂಟೆ ನಮಗೆ ಸೇರಿದೆ ಎಂದು ತೋರಿಸಲು ದಾಖಲೆಗಳು ಇವೆ. ಸಾಕ್ಷಿ ಮುಂದುವರಿದು ತಮಗೆ ಮತ್ತು ನಾಗರಾಜೇಗೌಡರಿಗೆ ಸೇರಿದೆ ಎಂದು ಹೇಳುತ್ತಾರೆ. ದಾವಾ ಷೆಡ್ಯೂಲ್ ಐಟಂ ನಂ.1 ರ ಪೈಕಿ ಅರ್ಧ ನಮಗೆ ಮತ್ತು  ಅರ್ಧ 6 ನೇ ಪ್ರತಿವಾದಿಗೆ ಸೇರಬೇಕಾಗಿದೆ ಎಂದರೆ ಸರಿ. ಈ ರೀತಿ ಸೇರಬೇಕೆಂದು 1984 ರ ಪಾಲುಪಟ್ಟಿಯಲ್ಲಿ ಸ್ಪಷ್ಟವಾಗಿ ನಮೂದು ಆಗಿದೆ ಎಂದರೆ ಸರಿ. ಹಾಗೆ ನಮೂದು ಇದ್ದರೂ ಸಹ ಸಣ್ಣಮ್ಮರವರ ಮರಣಾ ನಂತರ ಹಕ್ಕು ಬದಲಾವಣೆ ಆಗಲಿಲ್ಲ ಎಂದರೆ ಸರಿ. 1986 ರಲ್ಲಿ ಯಾವುದೇ ಪಾಲುಪಟ್ಟಿ ಆಗದೆ ಇದ್ದರೂ ಸಹ ಪಾಲುಪಟ್ಟಿ ಆಗಿದೆ ಎಂದು ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕಾರಣದಿಂದಲೇ ಎಲ್ ಎ ಸಿ ಅಮಲ್ದಾರಿ  ಅರ್ಜಿ ಪ್ರಕರಣ ಹಾಗೂ ದಾವೆಗಳಲ್ಲಿ ನಾವೆಲ್ಲರೂ ಒಬ್ಬರಾದ ನಂತರ ಒಬ್ಬರು ಅರ್ಜಿಗಳನ್ನು ಹಾಕಿಕೊಂಡು ಪಕ್ಷಗಾರರಾಗಿ ಸೇರ್ಪಡೆಗೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ.1 ರಲ್ಲಿ ಅರ್ಧ ಭಾಗಾಂಶವನ್ನು 6 ನೇ ಪ್ರತಿವಾದಿಗೆ ನೀಡಲು ನಮ್ಮ ತಕರಾರು ಇಲ್ಲ. ವಾದಿ ವೆಂಕಟೇಶರವರಿಗೆ ದಾವಾ ಆಸ್ತಿ ಐಟಂ ನಂ.1 ರಲ್ಲಿ ಭಾಗಾಂಶದ ಹಕ್ಕು ಹಾಗೂ ಬಾಧ್ಯತೆ ಯಾವುದು ಇಲ್ಲ. ನಮ್ಮ ತಂದೆಯ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡಿರದೆ ದಾವಾ ಆಸ್ತಿ ಐಟಂ ನಂ.1 ರ 0.31

ಗುಂಟೆ ಪೈಕಿ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡಿರುವ ಕಾರಣ ಕೌಂಟರ್ ಕ್ಲೇಮ್ ದಾಖಲಿಸಿದ್ದು ಅದಕ್ಕೂ ಸಹ ನಾವು ತಕರಾರು ಸಲ್ಲಿಸಿ ಅದು ವಜಾಗೊಂಡಿದೆ ಎಂದರೆ ಸರಿ. ವಾಸ್ತವ ಸಂಗತಿಗಳು ಹೊರಬರುತ್ತದೆ ಎಂಬ ಕಾರಣದಿಂದಾಗಿ ನ್ಯಾಯಾಲಯದ ನಿಯೋಗಿಯ ನೇಮಕದ ಬಗ್ಗೆ ನಾನು ಆಕ್ಷೇಪಣೆ ಎತ್ತುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**